## ಕುತೂಹಲ ಉಳಿಯದ 'ಬಿಗ್ ಬಾಸ್'!

ಕಲರ್ಸ್ ಕನ್ನಡದಲ್ಲಿ ಪ್ರಸಾರಗೊಂಡ 'ಬಿಗ್ ಬಾಸ್' ಮುಗಿದಿದೆ. ಕನ್ನಡದ ದೊಡ್ಡ ರಿಯಾಲಿಟಿ ಶೋ ಯಶಸ್ವಿಯಾಗಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಕಿಚ್ಚ ಸುದೀಪ್ ಅವರ ನಿರ್ವಹಣೆಯಂತೂ ಅಭೂತಪೂರ್ವವಾಗಿತ್ತು. 'ಬಿಗ್ ಬಾಸ್'ನಲ್ಲಿ ಯಾರು ಎಲಿಮಿನೇಷನ್ ಆಗುತ್ತಾರೆ ಎಂಬುದು ಅತ್ಯಂತ ಕುತೂಹಲ! ಶೋನಲ್ಲಿ ಅದೇ ಅತಿ ಮಹತ್ವದ್ದೂ ಕೂಡ. ಆದರೆ ಸ್ಪರ್ಧಾಳುಗಳಲ್ಲಿ ಯಾರು ಎಲಿಮಿನೇಷನ್ ಆಗುತ್ತಾರೆ ಎಂಬುದು ಮಾಧ್ಯಮದ ಮೂಲಕ ಮೊದಲೇ ಗೊತ್ತಾಗಿ ಪ್ರೇಕ್ಷಕರು ತಮ್ಮ ಕುತೂಹಲವನ್ನು ಕಳೆದುಕೊಳ್ಳುತ್ತಿದ್ದರು. ಅದು, ಎಷ್ಟರ ಮಟ್ಟಿಗೆ ಮುಂದುವರಿಯಿತೆಂದರೆ ಅಂತಿಮ ಸುತ್ತಿನಲ್ಲಿ ಯಾರು ಮೊದಲಿಗರು, ಯಾರು ಎರಡನೇಯವರು ಎಂಬುದು ಗೊತ್ತಾಯಿತು. ಹೀಗಾದರೆ ಶೋ ಹೇಗೆ ಮಜಾ ಅನಿಸೀತು? ಒಂಬತ್ತನೇ ಸರಣಿಯ 'ಬಿಗ್‌ಬಾಸ್'ನಲ್ಲಾದರೂ ಹಾಗಾಗದಿರಲಿ!

—ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ

## ನಿರೀಕ್ಷಿತ ಗೆಲುವು



ಕಲರ್ಸ್ ಕನ್ನಡದಲ್ಲಿ ಪ್ರಸಾರವಾದ 'ಬಿಗ್ ಬಾಸ್' ಸೀಸನ್ ಎಂಟು ಕೊರೊನಾ ಆತಂಕದ ನಡುವೆ ಯಶಸ್ವಿಯಾಗಿದ್ದು ವಿಶೇಷವೇ ಸರಿ.

ಈ ವರ್ಷ ವಿಭಿನ್ನವಾಗಿ ಕ್ರಿಕೆಟ್ ಮಾದರಿಯಲ್ಲಿ ಮೊದಲ ಇನಿಂಗ್ಸ್ ಮತ್ತು ಎರಡನೆಯ ಇನಿಂಗ್ಸ್ ಎಂದು ಮೂಡಿಬಂತು. ಕಾರ್ಯಕ್ರಮ ಅದ್ದೂರಿಯಾಗಿ ಮುಕ್ತಾಯಗೊಂಡಿದೆ. ಜನರ ನಿರೀಕ್ಷೆಯಂತೆಯೇ ಪ್ರೀತಿಗೆದ್ದು, ಮನೆಮನಗಳಲ್ಲಿ ಮಾತಾಗಿದ್ದ, ಮಂಜು ಪಾವಗಡ ಮೊದಲಿಗರಾದರು.

ಅವರ ಜೊತೆ ಹಲವಾರು ಪ್ರತಿಸ್ಪರ್ಧಿಗಳು ಇದ್ದರು. ಎಲ್ಲರೂ ಸೇರಿ ಒಳ್ಳೆಯ ಮನರಂಜನೆಯನ್ನು ನೀಡಿದ್ದಾರೆ. ಮಂಜು ಯಾರೊಡನೆಯೂ ಅದಷ್ಟು ಮನಸ್ತಾಪ ಬರದಹಾಗೆ ನಡೆದುಕೊಂಡರು. ಕೊನೆಯ ದಿನ ನಿರೂಪಕ ಸುದೀಪ್ ಅವರ ಜೊತೆ ಮಾತನಾಡುವಾಗ ಕೂಡ ತಮ್ಮ ಸ್ಪರ್ಧಿ ಅರವಿಂದ್ ಬಗ್ಗೆನೂ ಮೆಚ್ಚುಗೆಯ ಮಾತುಗಳನ್ನಾಡಿ ಪ್ರಭುದ್ಧತೆ ತೋರಿಸಿದ್ದಾರೆ.

—ಸೀತಾ ಕೇಶವ ಸಿಡ್ನಿ

ವಾರದ ಪತ್ರ

## ಸ್ಮರಣೀಯ ತಾಯಿ

ಸ್ಟಾರ್ ಸುವರ್ಣದ 'ಸುವರ್ಣ ಸೂಪರ್ ಸ್ಟಾರ್' ಕಾರ್ಯಕ್ರಮದಲ್ಲಿ ಒಬ್ಬ ಸ್ಪರ್ಧಿ ತನ್ನ ತಾಯಿಯೇ ತನಗೆ ಸೂಪರ್ ಸ್ಟಾರ್ ಎಂದರು. ಅದಕ್ಕೆ ಅವರು ನೀಡಿದ ವಿವರ ಭಾವುಕರನ್ನಾಗಿ ಮಾಡಿತು. ತನ್ನ ತಾಯಿ ವಿದ್ಯಾವಂತೆ ಅಲ್ಲ, ಮಧ್ಯವಯಸ್ಸಿನಲ್ಲೇ ತನ್ನ ಪತಿಯನ್ನು ಕಳೆದುಕೊಂಡು ನಂತರ ತನ್ನ ಮೂರು ಹೆಣ್ಣು ಮಕ್ಕಳು ಹಾಗೂ ಒಬ್ಬ ಮಗನನ್ನು ಓದಿಸುತ್ತಾರೆ. ಹೆಣ್ಣು ಮಕ್ಕಳಿಗೆ ಮದುವೆ ಮಾಡಿ, ಮಗನ ಉದ್ದಿಮೆಗೂ ಸಹಾಯ ಮಾಡಿದ್ದಾರೆ. ಇಷ್ಟೆಲ್ಲ ಮಾಡಲು ಆಕೆ ಆಯ್ದುಕೊಂಡ ಕೆಲಸ ಹೂ ಕಟ್ಟಿ ಮಾರುವುದು. ಇಂತಹದ್ದೇ ಕಷ್ಟವನ್ನು ಅನುಭವಿಸಿದ ಕುಟುಂಬ ಒಂದನ್ನು ನಾನು ಕಂಡಿದ್ದೇನೆ. ಆಕೆಯೂ ಹೇಗೆ ಹೂ ಕಟ್ಟಿ ಮಾರಿ ತನ್ನ ಇಬ್ಬರು ಹೆಣ್ಣು ಮಕ್ಕಳನ್ನು ಎಂಜಿನಿಯರಿಂಗ್ ಓದಿಸಿದ್ದಾರೆ. ಆ ಹೆಣ್ಣು ಮಕ್ಕಳು ಒಳ್ಳೆಯ ಕೆಲಸಕ್ಕೆ ಸೇರಿ, ಈಗ ವಿದೇಶದಲ್ಲಿ ಇದ್ದಾರೆ. ಇಂತಹ ತಾಯಿಯರಿಗೆ ನನ್ನ ಪ್ರಣಾಮಗಳು.

—ಕೆ.ಎಸ್. ಸವಿತ, ಬೆಂಗಳೂರು

## ಸೂಪರ್ 'ಸೂಪರ್ ಸ್ಟಾರ್'

ಸ್ಟಾರ್ ಸುವರ್ಣದಲ್ಲಿ ಪ್ರಸಾರವಾಗುವ 'ಸುವರ್ಣ ಸೂಪರ್ ಸ್ಟಾರ್' ಚೆನ್ನಾಗಿ ಮೂಡಿಬರುತ್ತಿದೆ. ಕಿರುತೆರೆ ನಟಿ ಶಾಲಿನಿ ಅವರು ನಡೆಸಿಕೊಡುತ್ತಿರುವ ಈ ಕಾರ್ಯಕ್ರಮ ಪ್ರತಿಯೊಂದು ಎಪಿಸೋಡ್‌ನಲ್ಲಿಯೂ ಹೊಸತನ ಕಾಯ್ದುಕೊಂಡಿದೆ. ಇದು ಥೀಮ್ ಓರಿಯಂಟೆಡ್ ಕಾರ್ಯಕ್ರಮವಾದ್ದರಿಂದ 'ಸೂಪರ್ ಸ್ಟಾರ್' ಎನಿಸಿಕೊಳ್ಳಲು ಸ್ಪರ್ಧಿಗಳು ಮಾಡುವ ಪ್ರಯತ್ನ ಶ್ಲಾಘನೀಯ. ಜೊತೆಗೆ ವೀಕ್ಷಕರನ್ನು ಕೂಡ ಬೇರೆಯದೇ ಆದ ಮೂಡ್‌ಗೆ ಕರೆದೊಯ್ಯುತ್ತದೆ. ಕೊರೊನಾ ಸೋಂಕಿನಿಂದ ಮುದುಡಿದ ಮನಕ್ಕೆ ಕೊಂಚ ನಿರಾಳವಾಗಲು ಇಂಥ ಕಾರ್ಯಕ್ರಮಗಳು ಸಹಕಾರಿ. ಬದುಕಿನ ಜಂಜಡವನ್ನೆಲ್ಲ ಮರೆತು ಕಾಮಿಡಿ, ಗಾಂಭೀರ್ಯ, ಸ್ಪರ್ಧಾ ಮನೋಭಾವ, ಜೀವನಶೈಲಿಯ ಪಾಠ... ಹೀಗೆ ಹಲವು ಆಯಾಮಗಳನ್ನೊಳಗೊಂಡ ಈ ಕಾರ್ಯಕ್ರಮ ಇನ್ನಷ್ಟು ದಿನ ನಡೆಯಲಿ.

—ಗೌರೀಶ, ಬೆಂಗಳೂರು

## ಪ್ರೋಮೊ ಅತಿ ಆಯಿತು

ಕಲರ್ಸ್ ಕನ್ನಡದ ಶನಿವಾರದ ಬಿಗ್‌ಬಾಸ್ ಫಿನಾಲೆಯಲ್ಲಿ ಶುಕ್ರವಾರದ ಕಾರ್ಯಕ್ರಮಗಳನ್ನೇ ತೋರಿಸಿದ್ದೆ ತೋರಿಸುತ್ತಾ ಮಧ್ಯದಲ್ಲಿ ಜಾಹೀರಾತು. ಧಾರಾವಾಹಿಗಳ ಪ್ರೋಮೊಗಳನ್ನು ಮತ್ತೆ ಮತ್ತೆ ತೋರಿಸಿದ್ದು ಸರಿ ಕಾಣಲಿಲ್ಲ. ಪ್ರಚಾರಕ್ಕೂ ಒಂದು ಇತಿ ಮಿತಿ ಬೇಡವೇ? ಇದು ಅಸಲಿಗೆ ಯಾರ ತಪ್ಪು ಎಂದು ಅರ್ಥವಾಗಲಿಲ್ಲ.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಕಥೆಯಾದರೂ ನೈಜತೆ

ಝೀ ಕನ್ನಡದ 'ಗಟ್ಟಿ ಮೇಳ'ದಲ್ಲಿ ನಾಯಕಿಯ ತಾಯಿ ತನ್ನ ಮಗಳ ಮದುವೆಗಾಗಿ ತನ್ನ ಕಿಡ್ನಿ ದಾನ ಮಾಡಿ ₹25 ಲಕ್ಷ ಪಡೆಯುತ್ತಾಳೆ. ಇಲ್ಲಿ ಅವಳು ಬೆಳಿಗ್ಗೆ ಆಸ್ಪತ್ರೆಗೆ ಹೋಗಿ ಆಪರೇಷನ್ ನಂತರ ಮಧ್ಯಾಹ್ನ ಮನೆಗೆ ಹಿಂತಿರುಗುತ್ತಾರೆ. ಒಂದು ಸಣ್ಣ ಆಪರೇಷನ್ ಆದರೇನೆ 2–3 ದಿನಗಳ ವಿಶ್ರಾಂತಿ ಅಗತ್ಯವಿರುತ್ತದೆ. ಹಾಗಿರುವಾಗ ಕಿಡ್ನಿ ದಾನ ಮಾಡುವುದು ಖಂಡಿತ ಸಣ್ಣ ಆಪರೇಷನ್ ಅಲ್ಲ.

ನಮ್ಮ ಕುಟುಂಬದಲ್ಲಿ ದಾನ ಮಾಡಿದವರನ್ನು ನೋಡಿದ್ದೇನೆ. ಅವರು ಸಹಜ ಸ್ಥಿತಿಗೆ ಬರಲು ತಿಂಗಳುಗಳೇ ಬೇಕಾಯಿತು. ಆದರೆ ನಮ್ಮ ನಾಯಕಿಯ ತಾಯಿ ಆರಾಮವಾಗಿ ಮನೆಗೆ ಬಂದಳು. ಮುಖದಲ್ಲಿ ಯಾವುದೇ ನೋವಿರಲಿಲ್ಲ. ಗಂಡನಿಗೆ, ಮಗಳಿಗೆ ಯಾವುದೇ ಅನುಮಾನವೂ ಬರಲಿಲ್ಲ. ಇನ್ನು ಆಸ್ಪತ್ರೆಯಲ್ಲಂತೂ ಡಾಕ್ಟರ್ ಬಂದು. ದಾನಿಗೆ ಅರವಳಿಕೆ ನೀಡಲು ನರ್ಸ್‌ಗೆ ಹೇಳಿ ಹೋಗುತ್ತಾರೆ. ನರ್ಸ್‌ಗಳೇ ಅರವಳಿಕೆ ನೀಡುವಂತೆ ಆದರೆ ಅರವಳಿಕೆ ತಜ್ಞರ ಅವಶ್ಯಕತೆ ಏಕೆ?

ಧಾರಾವಾಹಿಯೇ ಇರಬಹುದು ಆದರೆ ಸ್ವಲ್ಪವಾದರೂ ನೈಜವಾಗಿರಬೇಕಲ್ಲವೆ? ಒಂದು ರೀತಿಯಲ್ಲಿ ಸಮಾಜಕ್ಕೆ ಇದು ಅವರು ನೀಡುತ್ತಿರುವ ತಪ್ಪು ಸಂದೇಶ ಅಲ್ಲವೇ?

—ಗಾಯತ್ರಿ ದೇವಿ ಎ.ಎಚ್., ಬೆಂಗಳೂರು

## ಕಲ್ಲಂಗಡಿ ಹಣ್ಣು ಅಷ್ಟು ಗಟ್ಟಿಯೇ?

ಕಲರ್ಸ್ ಕನ್ನಡದ 'ನನ್ನರಸಿ ರಾಧೆ'ಯಲ್ಲಿ 'ನಾಯಕ ನಾಯಕಿಗೆ ಹೆದರ್ಕೋಬೇಡ, ನಾನು ಕಲ್ಲಂಗಡಿ ಹಣ್ಣಿನ ಹಾಗೆ ಗಟ್ಟಿ' ಎನ್ನುತ್ತಾನೆ. ಇದು ಯಾವ ಸೀಮೆ ಉಪಮೆ– ಅಲಂಕಾರ ಎಂದು ವೀಕ್ಷಕರು ಗಲಿಬಿಲಿಗೊಂಡಿದ್ದಾರೆ.

ಜನಸಾಮಾನ್ಯರು ತಿಳಿದಂತೆ ಕಲ್ಲಂಗಡಿ ಹಣ್ಣು ಗಟ್ಟಿಯಾಗಿರದೆ ಮೃದುವಾಗಿರುತ್ತದೆ. ನಾಯಕ ತಾನು ಗಟ್ಟಿ ಇಲ್ಲ ಎನ್ನುವುದಕ್ಕೆ ಈ ರೀತಿ ಹೇಳಿದರೋ ಅಥವಾ ತಿಳಿವಳಿಕೆಯ ಕೊರತೆ ಇಂದ ಸಂಭಾಷಣೆಕಾರರು ತನ್ನ ಸಾಹಿತ್ಯವನ್ನು ರಂಜಿಸುವ ಧಾವಂತದಲ್ಲಿ ಅನವಶ್ಯಕ ಉಪಮೆಯನ್ನು ಬಳಸಿ ಎಡವಿದರೋ ತಿಳಿಯದು. ಸಂಭಾಷಣೆಕಾರರು ಪದ ಪುಂಜಗಳ ಬಳಕೆಯಲ್ಲಿ ಉಪಮೆ ಅಲಂಕಾರಗಳನ್ನು ಮತ್ತು ಉದಾಹರಣೆಗಳನ್ನು ಬಳಸುವಾಗ ಹೆಚ್ಚಿನ ಎಚ್ಚರವಹಿಸಿ ಅನರ್ಥವಾಗದಂತೆ ಲಕ್ಷವಹಿಸಬೇಕು.

—ರಮಾನಂದ ಶರ್ಮಾ, ಬೆಂಗಳೂರು